# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ.: 08472-263202
ಫ್ಯಾಕ್ಸ್: 08472-263206
ಇ-ಮೇಲ್: registrargug@rediffmail.com

ಸಂ. ಗುವಿಕ:ವಿಮವಿ:ಪಿ.ಜಿ.-I:2017-18:845

ದಿನಾಂಕ: 01.07.2017.

<u>ಸುತ್ತೋಲೆ</u>

ವಿಷಯ: ಗುಲಬರ್ಗಾ ವಿಶ್ವವಿದ್ಯಾಲಯದ 2017-18ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶ ಪರೀಕ್ಷೆ ಕುರಿತು ವಿಶೇಷ ಮಾಹಿತಿ.

ಗುಲಬರ್ಗಾ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರಿಗೆ, ಸ್ನಾತಕೋತ್ತರ ಕೇಂದ್ರಗಳ ವಿಶೇಷಾಧಿಕಾರಿಗಳು ಹಾಗೂ ಸರಕಾರಿ ಮಹಾವಿದ್ಯಾಲಯ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೇನಂದರೆ, ಗುಲಬರ್ಗಾ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು 30.06.2017 ರಿಂದ 04.07.2017 ವರೆಗೆ ವಿಸ್ತರಿಸಲಾಗಿದೆ. ಅರ್ಜಿ ಶುಲ್ಕವನ್ನು ಬ್ಯಾಂಕಿನಲ್ಲಿ ಭರಿಸುವ ಕೊನೆಯ ದಿನಾಂಕ 05.07.2017 ಅಗಿರುತ್ತದೆ. ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಮುದ್ರಿತ ಪ್ರತಿ (Hard Copy)ಯನ್ನು ದಿನಾಂಕ 06.07.2017 ರೊಳಗಾಗಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರ (Hall Ticket)ವನ್ನು ದಿನಾಂಕ 08.07.2017 ರೊಳಗಾಗಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಂದ ಪಡೆಯತಕ್ಕದ್ದು.

ಪ್ರವೇಶ ಪರೀಕ್ಷಾ ಕೊಠಡಿಯಲ್ಲಿ ಯಾವುದೇ ವಿದ್ಯುನ್ಮಾನ ಉಪಕರಣಗಳನ್ನು ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ. ಯಾವುದೇ ರೀತಿಯ ವಿದ್ಯುನ್ಮಾನ ಉಪಕರಣಗಳಾದ ಮೋಬೈಲ್, ಬ್ಲ್ಯೂಟೂತ್‌ದಂತಹ ಇತರೆ ಉಪಕರಣಗಳು ಪರೀಕ್ಷಾರ್ಥಿಗಳ ಹತ್ತಿರ ದೊರೆತಲ್ಲಿ ಅಂತಹ ವಿದ್ಯಾರ್ಥಿಗಳನ್ನು ಸ್ಥಳದಲ್ಲಿಯೆ ಪರೀಕ್ಷೆಯಿಂದ "ಡಿಬಾರ್" (Debar) ಮಾಡಲಾಗುವುದು.

ಪದವಿ ಕೋರ್ಸಿನ ಅಂತಿಮ ಸೆಮಿಸ್ಟರ ಪರೀಕ್ಷೆ ಬರೆದ ಎಲ್ಲಾ ಅಭ್ಯರ್ಥಿಗಳೂ ಸಹ ಪ್ರವೇಶ ಪರೀಕ್ಷೆಗೆ ಹಾಜರಾಗಲು ಅರ್ಹರಿರುತ್ತಾರೆ.

ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿ, ಪ್ರವೇಶ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ತಮ್ಮ ಸ್ನಾತಕ ಪದವಿಯ ಎಲ್ಲಾ ಅಂಕಪಟ್ಟಿಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ದಿನಾಂಕ 19.07.2017 ರೊಳಗಾಗಿ ಸಲ್ಲಿಸಿದಲ್ಲಿ ಮಾತ್ರ, ಪ್ರವೇಶಾತಿಯ ಮೆರಿಟ್ ಪಟ್ಟಿ (Merit List) ಸಿದ್ಧಪಡಿಸುವಲ್ಲಿ ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಅಧಿಕಾರಿಗಳಿಗೆ ಸಂಪರ್ಕಿಸಬಹುದು.

1. ಪ್ರೊ. ಕೆ. ವಿಜಯಕುಮಾರ, ಅಧ್ಯಕ್ಷರು, ಪ್ರವೇಶಾತಿ ಸಮಿತಿ – 9480060508
2. ಪ್ರೊ. ಕೆ. ಸಿದ್ದಪ್ಪ, ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು – 9845644075
3. ಶ್ರೀ ಬಿ.ಎಂ. ರುದ್ರವಾಡಿ, ವಿದ್ಯಾಮಂಡಳ ವಿಭಾಗ – 9663447884

ಕುಲಸಚಿವರು 3.7.17
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಗೆ,

ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರಿಗೆ, ಗು.ವಿ.ಕಲಬುರಗಿ.

ಪ್ರತಿಗಳು:

1. ಎಲ್ಲಾ ನಿಕಾಯದ ಡೀನರಿಗೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.
2. ಕುಲಸಚಿವರು (ಮೌ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.
3. ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.
4. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ರಾಯಚೂರು ಹಾಗೂ ಬೀದರ.
5. ಪ್ರೊ. ಕೆ. ವಿಜಯಕುಮಾರ, ಅಧ್ಯಕ್ಷರು, ಪ್ರವೇಶಾತಿ ಸಮಿತಿ 2017-18 ಇವರ ಮಾಹಿತಿಗಾಗಿ.
6. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.
7. ನಿರ್ದೇಶಕರು, ಪಿ.ಎಂ.ಇ.ಬಿ., ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.
8. ಶಾಖಾ ಪ್ರಬಂಧಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾಲಯ, ಶಾಖೆ, ಕಲಬುರಗಿ.
9. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮಾಹಿತಿಗಾಗಿ.

D:\ACA Branch\ACA (Kannada) (C-3)I